ಒ. ಎಸ್. ನಂ.419/2017

ಪಿಡಬ್ಲೂ-1

ದಿನಾಂಕಃ 09.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು :- ಶ್ರೀ. ಪ್ರತಿವಾದಿ ಪರ ವಕೀಲರಿಂದಃ-**

ದಾವಾಸ್ತಿಯಲ್ಲಿ ಎಷ್ಟು ತೆಂಗಿನ ಮರ ಮತ್ತು ಇತರ ಮರಗಳು ಇವೆ ಎಂದು ಗೊತ್ತಿಲ್ಲ. ದಾವಾ ಸ್ವತ್ತಿನ ಸುತ್ತ ತಂತಿ ಕಡ್ಡಿಗಳಿಂದ ಬೇಲಿ ಹಾಕಿರುತ್ತದೆ. ದಾವಾ ಸ್ವತ್ತಿನಲ್ಲಿ ನಮ್ಮ ಅಜ್ಜ ಎರಡು ಮನೆ ಇರುತ್ತವೆ. ಸದರಿ ಮನೆಗಳಿಗೆ ಸಂಬಂದಿಸಿದಂತೆ ದಾಖಲೆಯನ್ನು ಹಾಜರುಪಸಿಡಿಸಿಲ್ಲ. ಸದರಿ ದಾಖಲೆಗಳನ್ನು ನ್ಯಾಯಾಲಯ ಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ದಾವಾಸ್ತಿಯಲ್ಲಿ ನನ್ನ ಅಜ್ಜ ಮನೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ಬಿ ರವರು ದಾವಾಸ್ತಿಯಲ್ಲಿರುವ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಅವರ ಗಂಡ ಮೃತ ಪಟ್ಟ ನಂತರ ನಾವೇ ಇರಲು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಪ್ರತಿವಾದಿ ಯವರು ಯಾವ ವರ್ಷ ಮನೆ ಕಟ್ಟಿರುತ್ತಾರೆ ಎಂದು ಗೊತ್ತಿಲ್ಲ ಎಂದರೆ ಸರಿ. ಕುಪ್ಪಾಯಿಯಮ್ಮ ರವರನ್ನು ಬೋಚಿಕಟ್ಟೆ ಯ ಕರೆಯ ಹತ್ತಿರ ಸುಟ್ಟ ಹಾಕಿರುತ್ತಾರೆ. ದಾವಾಸ್ತಿಯಲ್ಲಿ ಪ್ರತಿವಾದಿಗಳೇ ವ್ಯವಸಾಯ ಮಾಡಿಕೊಂಡು ಸ್ವಾಧೀನ ಇದ್ದಾರೆ ಎಂದರೆ ನಾವು ಒಟ್ಟಿಗೆ ಸ್ವಾಧೀನ ಇದ್ದೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡಲು ನೀರಾವರಿ ಮೂಲ ಯಾವುದು ಎಂದರೆ ಮಳೆ ಆಧರಿಸಿ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಹತ್ತಿ, ರಾಗಿ, ತೊಗರಿ ಮತ್ತು ಹರಿಸಿನ ಬೆಳೆಯನ್ನು ಬೆಳೆದಿರುತ್ತೇವೆ. ವರ್ಷದ ಯಾವ ಯಾವ ತಿಂಗಳಲ್ಲಿ ಯಾವ ಯಾವ ಬೆಳೆ ಬೆಳೆದಿರುತ್ತೀರಾ ಎಂದರೆ ಆಷಾಡ ತಿಂಗಳಲ್ಲಿ ಬೆಳೆ ಬೆಳೆದಿರುತ್ತೇವೆ. ಕುಪ್ಪಾಯಿಯಮ್ಮ ರವರ ಮಗ ಮುತ್ತು ಸ್ವಾಮಿಯವರು 2002 ರಲ್ಲಿ ಮೃತ ಪಟ್ಟಿರುತ್ತಾರೆ. ಸದರಿ ಮುತ್ತುಸ್ವಾಮಿಯವರು ಅಂತ್ಯ ಕ್ರಿಯೆಯನ್ನು ಬೋಚಿಕಟ್ಟೆ ಕರೆಯ ಬಳಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

ಪ್ರತಿವಾದಿ 1 ರವರನ್ನು ಸಹ ಬೋಚಿಕಟ್ಟೆಯ ಕರೆಯ ಬಳಿಯಲ್ಲಿ ಅಂತ್ಯ ಕ್ರಿಯೆ ಮಾಡಿರುತ್ತಾರೆ. ವೇಲು ಸ್ವಾಮಿಯವರ ಅಂತ್ಯಕ್ರಿಯೆಯನ್ನು ಯಾವ ವಿಧಾನದ ಮೂಲಕ ಮಾಡಿರುತ್ತೀರಾ ಎಂದರೆ ಮಣ್ಣು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಕುಪ್ಪಾಯಿಯಮ್ಮ ರವರ ವಾರಸುದಾರರ ಅಂತ್ಯ ಕ್ರಿಯೆಯನ್ನು ದಾವಾಸ್ವತ್ತಿನಲ್ಲಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವೇಲುಸ್ವಾಮಿರವರು ಯಾವಾಗ ಮುತ್ತು ಸ್ವಾಮಿರವರಿಗೆ ದಾವಾ ಸ್ವತ್ತಿನ ಸ್ವಾಧೀನವನ್ನು ನೀಡಿರುತ್ತಾರೆ ಎಂದರೆ ಇಬ್ಬರೂ ಒಟ್ಟಿಗೆ ಇದ್ದರು ಎಂದು ನುಡಿಯುತ್ತಾರೆ. ಕುಪ್ಪಾಯಿಯಮ್ಮ ರವರಿಂದ ಮುತ್ತುಸ್ವಾಮಿರವರ ಹೆಸರಿಗೆ ಪೌತಿ ಖಾತೆ ಬದಲಾವಣೆಯಾಗಿರುವ ವಿಷಯ ಯಾವಾಗ ಗೊತ್ತಾಯಿತು ಎಂದರೆ 2017 ನೇ ಇಸವಿಯಲ್ಲಿ ಎಂದು ನುಡಿಯುತ್ತಾರೆ. ಕುಪ್ಪಾಯಿಯಮ್ಮ ರವರ ವಾರಸುದಾರರು ಹೂಳುವ ಪದ್ಧತಿ ಇಲ್ಲ ಎಂದರೆ ಸರಿಯಲ್ಲ.

ವೇಲುಸ್ವಾಮಿಯವರು  ಕುಪ್ಪಾಯಿಯಮ್ಮ ಯವರ ಮಗ ಅಲ್ಲ ಮತ್ತು ಪ್ರತಿವಾದಿಗಳ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ವೇಲು ಸ್ವಾಮಿರವರು ಮೂಲತಃ ಎಲ್ಲಿನವರು ಎಂದು ಪ್ರತಿವಾದಿಗಳಿಗೂ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯನ್ನು ಕಬಳಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**2 ನೇ ಹೆಚ್ಚುವರಿ  ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು,  ಹೆಚ್.ಡಿ. ಕೋಟೆ**